# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಕೆಂಪೇಗೌಡನಗರ ಉಪವಿಭಾಗ

ಚಿಕ್ಕಪೇಟೆ ವಿಭಾಗ, ಬೆಂಗಳೂರು.

ಸ.ಕಾ.ನಿ.ಅ(ಕೆ.ಗೌ.ನ)ಪಿ.ಆರ್/ 266/2020-21. ದಿನಾಂಕ : 09-11-2020 .

ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ: ಬಿ12(5)ಪಿ.ಆರ್/35/2020-21, ದಿನಾಂಕ:29-09-2020 ಹಾಗೂ ನೋಡಲ್ ಅಧಿಕಾರಿ ರವರು ದಿನಾಂಕ: 07-11-2020 ರಂದು ಈ ಉಪವಿಭಾಗದ ವಾರ್ಡ್ ಸಂಖ್ಯೆ: 143 ವಾರ್ಡ್ ಕಛೇರಿಯಲ್ಲಿ ಸಭೆಯನ್ನು ಏರ್ಪಡಿಸಲಾಗಿ, ಸಭೆಯ ನಡಾವಳಿಗಳು ಈ ಕೆಳಕಂಡಂತಿರುತ್ತದೆ.

**ಉಪಸ್ಥಿತರು:**

| ಕ್ರ ಸಂ. | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಶ್ರೀ. ಉಮಾಶಂಕರ್ | ನೋಡಲ್ ಅಧಿಕಾರಿಗಳು ಹಾಗೂ ಉಪನಿರ್ದೇಶಕರು ನಗರ ಯೋಜನೆ (ದಕ್ಷಿಣ) | 9480684418 |
| 2 | ಶ್ರೀ. ಬೆನಕೇಶ್ ಆರ್ | ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು 143 | 9480684415 |
| 3 | ಶ್ರೀಹನಮಂತ ವನಚೋಳ್ | ಜಲ ಪರಿವೀಕ್ಷಕರು (BWSSB) | 9845444087 |
| 4 | ಶ್ರೀ.ನರಸಿಂಹ | ಕಿರಿಯ ಆರೋಗ್ಯ ಪರಿವೀಕ್ಷಕರು | 8660658637 |
| 5 | ಶ್ರೀ.ಎಸ್.ಹೇಮಂತ್ ಕುಮಾರ್ | ಸಹಾಯಕ ಅಭಿಯಂತರರು ಬೆಸ್ಕಾಂ | 9449870535 |
| 6 | ಶ್ರೀ.ಗೋವಿಂದರಾಜುಲು | ಕಂದಾಯ ವಸೂಲಿಗಾರರು | 9900691698 |
| 7 | ಶ್ರೀ.ಪುಟ್ಟರಾಜು | ಕಂದಾಯ ಪರಿವೀಕ್ಷಕರು | |
| 8 | ಡಾ!!. ಮಂಜೇಶ್ | ಆರೋಗ್ಯಾಧಿಕಾರಿ | 9742734530 |
| 9 | ಬಸವನಗುಡಿ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 8217636732 |
| 10 | ಶ್ರೀ.ರಾಮ ಐಯಂಗಾರ್ ರಸ್ತೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 9901066586 |
| 11 | ಎಂ.ಎಂ.ವಿ ರಸ್ತೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 9448387878 |
| 12 | ಚಿಕ್ಕಣ್ಣ ಗಾರ್ಡನ್ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 9448508638 |

Scanned by CamScanner

ದಿನಾಂಕ: 07-11-2020 ರಂದು ನಡೆದ ವಾರ್ಡ್ -143ರ ಸಮಿತಿ ಸಭೆಯ ನಡಾವಳಿಗಳು:

ಮಾನ್ಯ ನೋಡಲ್ ಅಧಿಕಾರಿಗಳ ಅನುಮತಿಯೊಂದಿಗೆ ವಾರ್ಡ್ ಸಮಿತಿಯ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರವರು ಸಭೆಯಲ್ಲಿ ಹಾಜರಿದ್ದ, ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್‌ಗಳ ಅಧ್ಯಕ್ಷರು ಮತ್ತು ವಿವಿಧ ಇಲಾಖೆಯ ಅಧಿಕಾರಿಗಳನ್ನು ಸ್ವಾಗತಿಸುವ ಮೂಲಕ ಸಮಿತಿ ಸಭೆಯನ್ನು ಪ್ರಾರಂಭಿಸಲಾಯಿತು.

ಮೊದಲು ಸಭೆಯಲ್ಲಿ ಹಾಜರಿದ್ದ MMV ರಸ್ತೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ ಅಧ್ಯಕ್ಷರಾದ ಶ್ರೀ. ವೆಂಕಟೇಶ್ ರವರು ಮಾತನಾಡಿ MMV ರಸ್ತೆಗೆ ಡಾಂಬರು ಹಾಕುವ ಕಾಮಗಾರಿ ಪ್ರಾರಂಭಿಸಿ ಸ್ವಚ್ಚತಾ ಕೆಲಸವನ್ನು ಮಾಡಿರುತ್ತಾರೆ. ಹಾಗೂ ಡಾಂಬರೀಕರಣ ಕಾಮಗಾರಿಯನ್ನು ಪೂರ್ಣಗೊಳಿಸಿರುವುದಿಲ್ಲವಾದ್ದರಿಂದ ಆದಷ್ಟು ಬೇಗ ಕಾಮಗಾರಿಯನ್ನು ಪೂರ್ಣಗೊಳಿಸಿಕೊಡಬೇಕೆಂದು ಸಭೆಯ ಗಮನಕ್ಕೆ ತಂದರು. ಅದಕ್ಕೆ ಪ್ರತಿಯಾಗಿ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು ಮಾತನಾಡಿ ಮಳೆ ಬರುತ್ತಿದ್ದುದರಿಂದ ಕಾಮಗಾರಿಯು ವಿಳಂಬವಾಗಿದೆ ಹಾಗೂ ಮಳೆ ಕಡಿಮೆಯಾದ ಕೂಡಲೇ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದಾಗಿ ಸಭೆಗೆ ತಿಳಿಸಿದರು.

ನಂತರ MMV ರಸ್ತೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ ಅಧ್ಯಕ್ಷರಾದ ಶ್ರೀ. ವೆಂಕಟೇಶ್ ರವರು ಪುನಃ ಮಾತನಾಡಿ ಕನ್ಸರವೆನ್ಸಿ ರಸ್ತೆಯಲ್ಲಿ ಖಾಸಗಿ ಕಟ್ಟಡದ ಮಾಲೀಕರು ತಾತ್ಕಾಲಿಕ ಶೆಡ್ ನಿರ್ಮಿಸಿಕೊಂಡಿರುವುದನ್ನು ತೆರವುಗೊಳಿಸಬೇಕೆಂದು ಸಭೆಗೆ ತಿಳಿಸಿದರು. ಈ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ ಸದರಿ ಶೆಡ್‌ಗಳನ್ನು ತೆರವುಗೊಳಿಸುವಂತೆ ನೋಡಲ್ ಅಧಿಕಾರಿಗಳು ವಾರ್ಡ್‌ನ ಅಭಿಯಂತರರಿಗೆ ಸೂಚಿಸಿದರು. ಈ ಬಗ್ಗೆ ಕ್ರಮವಹಿಸುವುದಾಗಿ ವಾರ್ಡ್ ಅಭಿಯಂತರರು ಸಭೆಗೆ ತಿಳಿಸಿದರು.

ನಂತರ ಬಸವನಗುಡಿ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಷಿಯೇಷನ್‌ನ ಅಧ್ಯಕ್ಷರಾದ ಶ್ರೀ. ರಾಜು ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿರುವ ರಸ್ತೆ ಬದಿಯ ಮರಗಳಲ್ಲಿ ಸಾಕಷ್ಟು ಒಣಗಿದ ಕೊಂಬೆಗಳಿದ್ದು, ಇವುಗಳು ಯಾವುದೇ ಹಂತದಲ್ಲಿ ಮುರಿದು ಬೀಳುವ ಸಂಭವವಿದ್ದು, ಇವುಗಳನ್ನು ತೆರವುಗೊಳಿಸಲು ಕ್ರಮಕೈಗೊಳ್ಳುವಂತೆ ಸಭೆಗೆ ತಿಳಿಸಿದರು. ಇದಕ್ಕೆ ನೋಡಲ್ ಅಧಿಕಾರಿಗಳು ಮಾತನಾಡಿ ಬಿಬಿಎಂಪಿ ಅರಣ್ಯ ವಿಭಾಗದವರಿಗೆ ಈ ಬಗ್ಗೆ ಸೂಕ್ತ ಕ್ರಮವಹಿಸಲು ತಿಳಿಸಲಾಗುವುದೆಂದು ಸಭೆಗೆ ತಿಳಿಸಿದರು.

ನಂತರ ಚಿಕ್ಕಣ್ಣ ಗಾರ್ಡನ್ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್‌ನ, ಬಸವನಗುಡಿ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಷಿಯೇಷನ್‌ನ, ಹಾಗೂ MMV ರಸ್ತೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್‌ನ ಅಧ್ಯಕ್ಷರವರುಗಳು ಮಾತನಾಡಿ ವಾಸವಿ ದೇವಸ್ಥಾನದ ರಸ್ತೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿಯನ್ನು ಹಾಗೂ ಅದೇ ರಸ್ತೆಯಲ್ಲಿ BWSSB, ಕೊಳವೆ ಸಂಪರ್ಕವನ್ನು ತ್ವರಿತವಾಗಿ ಮಾಡಿ ಮುಗಿಸಲು ಕ್ರಮವನ್ನು ಕೈಗೊಳ್ಳಬೇಕೆಂದು ಸಭೆಗೆ ತಿಳಿಸಿದರು. ಇದಕ್ಕೆ ನೋಡಲ್ ಅಧಿಕಾರಿಗಳು ಮಾತನಾಡಿ ಈ ಬಗ್ಗೆ ಕೂಡಲೇ ಕ್ರಮವಹಿಸಲು ಬಿಬಿಎಂಪಿ ಕೇಂದ್ರ ಪ್ರಜೆಕ್ಟ್ ವಿಭಾಗಕ್ಕೆ ತಿಳಿಸಲಾಗುವುದೆಂದು ಸಭೆಗೆ ತಿಳಿಸಿದರು.

Scanned by CamScanner

ನಂತರ BRWA ಅಧ್ಯಕ್ಷರು ಮಾತನಾಡಿ ಕನಕಪುರ ರಸ್ತೆಯಲ್ಲಿ 2 ಸಂಖ್ಯೆಯ Pot holes ಗಳಿದ್ದು ಅವುಗಳನ್ನು ಮುಚ್ಚಲು ಸಭೆಯಲ್ಲಿ ಕೋರಿದರು., ಸದರಿ ರಸ್ತೆಯು ವೈಟ್ ಟಾಪಿಂಗ್ ಕಾಮಗಾರಿಯಲ್ಲಿ ಸೇರಿದ್ದು, ಇದು ವಿಳಂಭವಾಗುತ್ತಿದ್ದು ಸದ್ಯ Pot holes ಮುಚ್ಚಲು ವಾರ್ಡ್ ವ್ಯಾಪ್ತಿಯ ಗುತ್ತಿಗೆದಾರರಿಗೆ ಕಾರ್ಯದೇಶ ನೀಡಿಲ್ಲವಾಗಿರುವುದರಿಂದ ಬಿಬಿಎಂಪಿ ಪ್ರಾಜೆಕ್ಟ್ ವಿಭಾಗದ ಪ್ಲಾಂಟ್‌ನಿಂದ ಟಾರ್ ಮಿಕ್ಸ್‌ಅನ್ನು ತೆಗೆದುಕೊಂಡು ಗುಂಡಿಗಳನ್ನು ಮುಚ್ಚಲು ಕ್ರಮವಹಿಸಲಾಗುವುದೆಂದು ವಾರ್ಡ್‌ನ ಅಭಿಯಂತರರು ಸಭೆಗೆ ತಿಳಿಸಿದರು.

ನಂತರ BRWA ಅಧ್ಯಕ್ಷರು ಮಾತನಾಡಿ ಕನಕಪುರ ರಸ್ತೆ ಹಾಗೂ ಎಲ್ಲಾ ರಸ್ತೆಗಳಲ್ಲಿ ಎಲ್.ಇ.ಡಿ. ಬೀದಿ ದೀಪಗಳನ್ನು ಅಳವಡಿಸುವಂತೆ ಸಭೆಗೆ ತಿಳಿಸಿದರು. ಈ ಬಗ್ಗೆ ಸೂಕ್ತ ಕ್ರಮವಹಿಸಲು ಬಿಬಿಎಂಪಿ ಎಲೆಕ್ಟ್ರಿಕಲ್ಸ್ ವಿಭಾಗಕ್ಕೆ ತಿಳಿಸುವುದಾಗಿ ನೋಡಲ್ ಅಧಿಕಾರಿಗಳು ಸಭೆಗೆ ತಿಳಿಸಿದರು.

ನಂತರ ರಾಮಯ್ಯಂಗಾರ್ ರಸ್ತೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್‌ನ ಸದಸ್ಯರಾದ ಓ.ವಿ.ಜಯಕುಮಾರ್ ರವರು ಮಾತನಾಡಿ ರಾಮ ಐಯ್ಯಂಗಾರ್ ರಸ್ತೆಯ ಮನೆಗಳಿಗೆ ಸಮರ್ಪಕವಾಗಿ ನೀರು ಸರಬರಾಜಾಗುತ್ತಿಲ್ಲ ಎಂದು ಸಭೆಗೆ ತಿಳಿಸಿದರು. ಈ ಬಗ್ಗೆ ಸೂಕ್ತ ಕ್ರಮ ವಹಿಸಲು ಸಭೆಯಲ್ಲಿ ಹಾಜರಿದ್ದ BWSSB ಅಧಿಕಾರಿಳಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.

ನಂತರ ಚಿಕ್ಕಣ್ಣ ಗಾರ್ಡನ್ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೋಷನ್‌ನ ಅಧ್ಯಕ್ಷರಾದ ಶ್ರೀ. ಗೋಪಾಕೃಷ್ಣರವರು ಮಾತನಾಡಿ ಬೀದಿ ಹಸುಗಳು ರಸ್ತೆಗಳಲ್ಲಿ ಓಡಾಡುತ್ತಿರುವುದುರಿಂದ ಸಂಚಾರ ದಟ್ಟಣೆ ಹೆಚ್ಚಾಗುತ್ತಿರುವುದಾಗಿ ತಿಳಿಸಿ, ಅವುಗಳನ್ನು ಹಿಡಿದು ಬಿಬಿಎಂಪಿ ವಶಕ್ಕೆ ಪಡೆದು ಸಂಬಂಧಿಸಿದವರಿಗೆ ದಂಡ ವಿಧಿಸುವಂತೆ ಸಭೆಗೆ ತಿಳಿಸಿದರು. ಈ ಬಗ್ಗೆ ಸೂಕ್ತ ಕ್ರಮ ವಹಿಸಲು ಬಿಬಿಎಂಪಿ ಪಶು ಸಂಗೋಪನಾ ವಿಭಾಗಕ್ಕೆ ತಿಳಿಸಲಾಗುವುದೆಂದು ನೋಡಲ್ ಅಧಿಕಾರಿಗಳು ಸಭೆಗೆ ತಿಳಿಸಿದರು.

ನಂತರ ಚಿಕ್ಕಣ್ಣ ಗಾರ್ಡನ್ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೋಷನ್‌ನ ಅಧ್ಯಕ್ಷರಾದ ಶ್ರೀ. ಗೋಪಾಕೃಷ್ಣರವರು ಮಾತನಾಡಿ ಮಾರ್ಕೆಟ್ ರಸ್ತೆ (ಫುಡ್ ಸ್ಟ್ರೀಟ್) ಯಲ್ಲಿ ಸಂಜೆ ವೇಳೆಯಲ್ಲಿ ಬರುವ ಸಾರ್ವಜನಿಕರು ಮಾಸ್ಕ್‌ಗಳನ್ನು ಧರಿಸದೆ, ಸಾಮಾಜಿಕ ಅಂತರವಿಲ್ಲದೆ ಓಡಾಡುತ್ತಿರುವುದರಿಂದ ಕೋವಿಡ್ – 19 ಸೊಂಕು ಹರಡುವ ಸಾಧ್ಯತೆ ಹೆಚ್ಚಾಗಿರುತ್ತದೆ ಎಂದು ತಿಳಿಸಿ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸಭೆಗೆ ತಿಳಿಸಿದರು. ಇದಕ್ಕೆ ಸಭೆಯಲ್ಲಿ ಹಾಜರಿದ್ದ ವಾರ್ಡ್‌ನ ವೈದ್ಯಾಧಿಕಾರಿಯಾದ ಶ್ರೀ. ಮಂಜೇಶ್ ರವರು ದನಿಗೂಡಿಸಿದರು. ಈ ಬಗ್ಗೆ ಸಭೆಯಲ್ಲಿ ವಿಸ್ತೃತವಾಗಿ ಚರ್ಚಿಸಿ ವಾರ್ಡ್ ವ್ಯಾಪ್ತಿಗೆ ಬರುವ ಪೊಲೀಸ್ ಅಧಿಕಾರಿಗಳನ್ನು ಬಳಸಿಕೊಂಡು (ಕ್ರೈಮ್ ಮತ್ತು ಸಂಚಾರಿ ಪೊಲೀಸ್) ಬಿಬಿಎಂಪಿ ವೈದ್ಯಾಧಿಕಾರಿಗಳು, ಮಾರ್ಷಲ್‌ಗಳು ಇತ್ಯಾದಿ ಸಿಬ್ಬಂಧಿಗಳನ್ನು ಬಳಸಿಕೊಂಡು ಈ ಬಗ್ಗೆ ತ್ವರಿತ ಕ್ರಮ ಕೈಗೊಳ್ಳಲಾಗುವುದೆಂದು ನೋಡಲ್ ಅಧಿಕಾರಿಗಳು ಸಭೆಗೆ ತಿಳಿಸಿದರು.

ನಂತರ ಕಾರ್ಯದರ್ಶಿಗಳಿಂದ ಎಲ್ಲರಿಗೂ ವಂದಿಸಿ ಕಮಿಟಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| ಕಾರ್ಯದರ್ಶಿಗಳು ಹಾಗೂ<br>ಸಹಾಯಕ ಅಭಿಯಂತರರು<br>ವಾರ್ಡ್ –143, ವಿ.ವಿ.ಪುರಂ | ನೋಡಲ್ ಅಧಿಕಾರಿಗಳು<br>ವಾರ್ಡ್ ಸಂಖ್ಯೆ: 143 ಹಾಗೂ<br>ಉಪನಿರ್ದೇಶಕರು ನಗರ ಯೋಜನೆ (ದಕ್ಷಿಣ) |

Scanned by CamScanner